**CW : 1**

PW : 1

ದಿನಾಂಕಃ**19.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರಿದ ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಕೃತ್ಯಕ್ಕೆ ಸಂಬಂಧಿಸಿದಂತೆ ಒಂದು ಸಿಡಿಯನ್ನು ಪೊಲಿಸೇರಿಗೆ ನೀಡಿದ್ದೇನೆ. ಸಿಡಿಯಲ್ಲಿ ನಾನು ತೋಟಕ್ಕೆ ಹೋಗಿರುವುದು ಮತ್ತು ಅಲ್ಲಿ ನಡೆದ ಕೃತ್ಯದ ಬಗ್ಗೆ ದಾಖಲಾಗಿರುತ್ತದೆ. ನಾನು ಪೋಲೀಸರಿಗೆ ನೀಡಿದ್ದ ಸಿಡಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಒಂದು ಸಿಡಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

ನಾನು ಸಿಡಿ ಹಾಜರುಪಡಿಸಿದ ಬಗ್ಗೆ ಒಂದು ದಾಖಲೆ ಬರೆದುಕೊಟ್ಟಿದ್ದೇನೆ. ಸದರಿ ದಾಖಲೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದ ದೃಡಪತ್ರವನ್ನು ಹಾಗೂ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೃಡಪತ್ರವನ್ನು ನಿಪಿ-6 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು.

ನ್ಯಾಯಾಧೀಶರ ಸಮ್ಮುಖ ನಾನು ನೀಡಿದ್ದ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ತಾವು ನೀಡಿದ ಕಲಂ 164 ಸಿ ಆರ್ ಪಿ ಸಿ ಹೇಳಿಕೆ ಮತ್ತು ತಮ್ಮ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-7 ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ನಿಪಿ-4 ರ ಸಮಯದಲ್ಲಿ ಹಾಜರುಪಡಿಸಿದ್ದ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಲಾದ ನೈಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ತಿಮ್ಮಯ್ಯ ಮತ್ತು ಅಬಿಷೇಕ್ ಎನ್ನುವವರ ಪರಿಚಯ ನನಗೆ ಇಲ್ಲ. 1 ನೇ ಆರೋಪಿಗೆ ಕೃಷಿಯ ವಿಚಾರದಲ್ಲಿ ರಾಜ್ಯಪುರಸ್ಕಾರ ಸಿಕ್ಕಿರುವ ವಿಚಾರ ಗೊತ್ತು. ನ್ನ ಮನೆ ಕೆಲಸ ಆಗುವಾಗ ನಾನು ನನ್ನ ತಂದೆ ತಾಯಿಯ ಮನೆಯಲ್ಲಿ ಇದ್ದೆ. ಅಲ್ಲಿ 1 ನೇ ಆರೋಪಿ ಕೂಡಾ ವಾಸ ಇದ್ದರು. ನಾನು ನನ್ನ ತಂದೆ ತಾಯಿಯ ಮನೆಯಲ್ಲಿ ವಾಸ ಇದ್ದಾಗ 1 ನೇ ಆರೋಪಿ ಕಿರಿಕಿರಿ ಮಾಡುತ್ತಿದ್ದರು. ಆ ಸಮಯದಲ್ಲಿ ನಾನು ಕಂಪ್ಲೇಂಟ್ ಕೊಟ್ಟಿಲ್ಲ.

**CW : 1**

PW : 1

ನನ್ನ ಗಂಡನಿಗೆ ವಾಹನ ಚಾಲನೆ ಮಾಡಲು ಬರುತ್ತದೆ. ಪಾಲು ಕಿರಿಕಿರಿಯಾಗುವ ಮೊದಲೇ ಆಗಿದೆ. ನನಗೆ ಮತ್ತು ಆರೋಪಿತರ ಮದ್ಯೆ ವೈಮನಸ್ಸು ಇರಲಿಲ್ಲ. ನನಗೆ ಪಾಲು ಮಾಡಿಕೊಟ್ಟ ಜಾಗದಲ್ಲಿ ಕೆಲವು ಕಡೆ ಪೊದೆ, ಕಲ್ಲು ಇರುತ್ತದೆ. ನಮ್ಮ ಜಾಗದಲ್ಲಿ ಅಡಿಕೆ, ತೆಂಗು ಮತ್ತು ಪೆಪ್ಪರ್ ಹಾಗೂ ಅರಣ್ಯ ಕೃಷಿ ಇದೆ. ಘಟನೆ ನಡೆಯಲಾಯಿತು ಎನ್ನುವ ಸ್ಥಳದಲ್ಲಿ ಅಡಿಕೆ ತೆಂಗು ಹಾಗೂ ಪೆಪ್ಪರ್ ಕೃಷಿ ಇದೆ. ಅಲ್ಲಿ ಇರುವ ಮರಗಳಿಗೆ ಸುಮಾರು 15-20 ವರ್ಷ ವಯಸ್ಸಾಗಿದೆ. ಅಗತ್ಯ ಇರುವಾಗ ಕೆಲಸಗಾರರು ಕೆಲಸ ಮಾಡಲು ಬರುತ್ತಾರೆ.

ಘಟನೆ ನಡೆಯಲಾಯಿತು ಎನ್ನುವ ಪೂರ್ವ ದಿಕ್ಕಿಗೆ ನಮ್ಮದೇ ಅರಣ್ಯ ಕೃಷಿ ಇರುವ ಜಾಗ. ಉತ್ತರಕ್ಕೆ ಅರುಣ್ ಕುಮಾರ್ ರೈ ರವರ ಹಟ್ಟಿ, ಪಶ್ಚಿಮಕ್ಕೆ ಅರುಣ್ ಕುಮಾರ್ ರೈ ರವರಿಗೆ ಸೇರಿದ ಗೊಡೋನ್ ಮತ್ತು ಜಾಗ. ನನ್ನ ಮನೆ ಗಲಾಟೆ ನಡೆಯಲಾಯಿತು ಎನ್ನುವ ಸ್ಥಳದಿಂದ ದಕ್ಷಿಣದ ಕಡೆ 100 ಅಡಿಗಳಷ್ಟು ದೂರದಲ್ಲಿದೆ. ಘಟನೆ ನಡೆಯಲಾಯಿತು ಎನ್ನುವ ಸ್ಥಳದಲ್ಲಿ ನನಗೆ ಸೇರಿದ 1 ಎಕರೆ 1 ಸೆಂಟ್ ಜಾಗವಿದೆ. ಪೊಲೀಸರಿಗೆ ಈ ಘಟನೆಯ ಸಂಬಂಧಿತವಾಗಿ ನನಗೆ ಸೇರಿದ ಜಮೀನಿನ ಆರ್ ಟಿ ಸಿ ಕೊಟ್ಟಿಲ್ಲ. ಸದರಿ ಜಮೀನಿನ ಪಶ್ಚಿಮ ದಿಕ್ಕಿಗೆ ಅರುಣ್ ಕುಮಾರ್ ರೈ ರವರ ಜಾಗವಿದೆ. ಘಟನೆಯಾದ ಸ್ಥಳದಿಂದ ಏನಾದರೂ ಶಬ್ದವಾದರೆ ನಮ್ಮ ಮನೆಗೆ ಕೇಳುತ್ತದೆ. ಘಟನೆ ಆಯಿತು ಎನ್ನುವ ದಿನ ಮದ್ಯಾಹ್ನ 3.00 ಗಂಟೆಗೆ ಘಟನೆಯಾದ ಸ್ಥಳದಿಂದ ಶಬ್ದ ಕೇಳಿತು. ನಾನು 5 ನಿಮಿಷ ಶಬ್ದ ಬಂದಿದ್ದನ್ನು ಗಮನಿಸಿದ್ದೇನೆ. ಆ ಸಮಯದಲ್ಲಿ ನನ್ನ ಗಂಡ ಮನೆಯಲ್ಲಿದ್ದರು. ಅವರಿಗೆ ವಿಷಯವನ್ನು ತಿಳಿಸಿದ್ದೇನೆ. ನಂತರ ಘಟನೆ ನಡೆಯಲಾಯಿತು ಎನ್ನುವ ಸ್ಥಳಕ್ಕೆ ನನ್ನ ಗಂಡ ಬಂದಿಲ್ಲ. ನಾನೇ ಹೋಗಿದ್ದೇನೆ. ನಾನು ಪ್ರಥಮವಾಗಿ ಸ್ಥಳಕ್ಕೆ ಹೋಗಿ ನೋಡಿದಾಗ 125 ಅಡಿ ಬೇಲಿ ಹಾಕಲಾಗಿತ್ತು. ಆ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿದ್ದೇನೆ. ಅವರು ಆ ವಿಚಾರವನ್ನು ಬರೆದುಕೊಂಡಿದ್ದಾರೆ. ಎಷ್ಟು ಕಲ್ಲುಕಂಬ ಇತ್ತು ಎಂದು ನಾನು ಪೊಲೀಸರಿಗೆ ತಿಳಿಸಿದ್ದೇನೆ, ಮಹಜರು ಮಾಡಿದ ಸಮಯ ಪೂಲೀಸರು ಬೇಲಿಯ ಎತ್ತರ ಮತ್ತು ಕಲ್ಲಿನ ಕಂಬಗಳ ಬಗ್ಗೆ ಬರೆದುಕೊಂಡಿದ್ದಾರೆ. ನಾನು ಪ್ರಥಮವಾಗಿ ಆರೋಪಿತರನ್ನು ನೋಡಿದಾಗ ಅವರು ನನ್ನ ಮನೆಯ ಹತ್ತಿರ ಇರುವ ದಕ್ಷಿಣದ ಅಂಚಿನಲ್ಲಿದ್ದರು. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿತರು ನನ್ನನ್ನು ಬೈಯಲು ಪ್ರಾರಂಬಿಸಿದರು ಮತ್ತು ಸ್ಥಳದಲ್ಲಿಯೇ ಇದ್ದರು.

ಮಹಜರಿಗೆ ಬರುವ ಮೊದಲು ಆರೋಪಿತರು ಬೇಲಿ ಹಾಕುವುದನ್ನು ಮುಂದುವರಿಸಿದ ಬಗ್ಗೆ ನನಗೆ ಗೊತ್ತಿಲ್ಲ, ನಾವು ಮನೆಯಲ್ಲಿ ತುಳು ಭಾಷೆ ಮಾತನಾಡುತ್ತೇವೆ. ಆರೋಪಿತರು ಕೂಡಾ ತುಳುಭಾಷೆ ಮಾತನಾಡುತ್ತಿದ್ದರು. ನನಗೆ ರಕ್ತ ಬರುವಂತಹ ಗಾಯ ಆಗಿರಲಿಲ್ಲ. ನನ್ನ ಕುತ್ತಿಗೆಗೆ ಬೆನ್ನಿಗೆ, ಎದೆಗೆ,

ಕಾಲಿಗೆ ಬಿದ್ದ ಕಾರಣ ಪೆಟ್ಟಾಗಿತ್ತು. ನನ್ನ ಬಟ್ಟೆ ಹರಿದಿತ್ತು. ಎಷ್ಟು ಉದ್ದಕ್ಕೆ ಬಟ್ಟೆ ಹರಿದಿತ್ತು ಎಂದು ಪೊಲೀಸರಿಗೆ ಹೇಳಿದ್ದೇನೆ ಮತ್ತು ಅದನ್ನು ಪೊಲೀಸರು ಮಹಜರಿನಲ್ಲಿ ಬರೆದಿದ್ದಾರೆ. ನಾನು ಬಿದ್ದ ಕಾರಣ ಬಟ್ಟೆಗೆ ಮಣ್ಣಾಗಿತ್ತು. ಅದನ್ನೂ ಕೂಡಾ ಪೋಲೀಸರಿಗೆ ತಿಳಿಸಿದ್ದು ಅವರು ಮಹಜರಿನಲ್ಲಿ ಬರೆದಿದ್ದಾರೆ.

ಮಹಜರು ಕಾಲದಲ್ಲಿ ಪೊಲೀಸರು ನನ್ನ ಮತ್ತು 1 ನೇ ಆರೋಪಿಯ ಜಮೀನಿನ ಮದ್ಯದ ಗಡಿಗುರುತನ್ನು ತೋರಿಸಿದ್ದರು. ಅದನ್ನು ಪೊಲೀಸರು ಮಹಜರಿನಲ್ಲಿ ಬರೆದಿಲ್ಲ. ಬರೆದುಕೊಳ್ಳಲ ನನ್ನ ಆಕ್ಷೇಪ ಇರಲಿಲ್ಲ. ಚಾಸಾ-3 ರವರು ಘಟನೆ ಸಮಯ ಸ್ಥಳದಲ್ಲೇ ಇದ್ದರು. ನನ್ನ ಗಂಡ 1 ನಿಮಿಷದಲ್ಲಿ ಸ್ಥಳಕ್ಕೆ ಬಂದಿದ್ದಾರೆ. ನನ್ನನ್ನು ತೋಟದಲ್ಲಿ ಓಡಿಸಿಕೊಂಡು ಹೋಗಿದ್ದಾರೆ. ನನ್ನನ್ನು ಸ್ಥಳದಿಂದ ದಕ್ಷಿಣ ದಿಕ್ಕಿಗೆ ಮತ್ತು ವಾಪಸ್ಸು ಘಟನೆ ನಡೆದ ಸ್ಥಳಕ್ಕೆ ಅಸುಮಾರ 10 ಮೀಟರ್ ದೂರ ಓಡಿಸಿರುತ್ತಾರೆ. ಆರೋಪಿತರು ನನ್ನನ್ನು ಓಡಿಸಿದ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿಲ್ಲ. ಆರೋಪಿತರು ಓಡಿಸಿದ್ದ ಜಾಗವನ್ನು ಪೊಲೀಸರು ಬಂದಾಗ ನಾನು ತೋರಿಸಿಲ್ಲ.

ಮನೆಯಿಂದ ಆಸ್ಪತ್ರೆಗೆ 4.15 ಕ್ಕೆ ಹೋಗಿದ್ದೇನೆ. ನನಗೆ ಆಗಿದ್ದಾವೆ ಎಂದು ಹೇಳಲಾದ ಗಾಯಗಳ ಸಂಬಂಧ ಮಾಹಿತಿಯನ್ನು ವೈದ್ಯರಿಗೆ ನಾನೇ ಕೊಟ್ಟಿದ್ದೇನೆ. ನಾನು 2 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದೆನು. ಪೊಲೀಸರು ಬಂದ ನಂತರ ನನ್ನನ್ನು ಅರ್ಧ ಗಂಟೆ ವಿಚಾರಿಸಿದ್ದಾರೆ. ಒಬ್ಬರೇ ಪೊಲೀಸರು ಬಂದಿದ್ದರು. ದೂರನ್ನು ಹರೀಷ್ ಎನ್ನುವವರು ಬರೆದಿದ್ದಾರೆ. ನಾನು ಓದಿ ನೋಡಿದ್ದೇನೆ. ಅದರಲ್ಲಿ ಸಣ್ಣ ಸಣ್ಣ ಒಂದು ಅಥವಾ 2 ಚಿತ್ತುಗಳು ಇದ್ದವು. ಚಿತ್ತು ಇರುವಲ್ಲಿ ನಾನು ಸಹಿ ಮಾಡಿಲ್ಲ. ದೂರಿಗೆ ಸಹಿ ಮಾಡಿದ್ದೇನೆ. ಚಿತ್ತು ಮಾಡಿರುವಲ್ಲಿ ಸಹಿ ಮಾಡಬೇಕು ಎಂದು ನನಗೆ ಗೊತ್ತು. ಎಫ್ಐಆರ್ ನ ಪ್ರತಿಯನ್ನು ಕೊಟ್ಟಿದ್ದಾರೆ. ನಾನೇ ಫೋನ್ ನಲ್ಲಿ ಒಂದು ಫೊಟೋ ತೆಗೆದುಕೊಂಡಿದ್ದೇನೆ. ನಾನು ಪೋಲೀಸರಿಗೆ ವಿನಂತಿಸಿಕೊಂಡು ಅಸ್ಪತ್ರೆಯಲ್ಲಿಯೇ ಎಫ್ಐಆರ್ ನ ಫೊಟೋ ತೆಗೆದುಕೊಂಡಿದ್ದೇನೆ.

ಮಹಜರು ಕಾಲದಲ್ಲಿ ಹಾಜರಿರುವಂತೆ ಪೊಲೀಸರು ಪೋ ಠಾಣೆಯಲ್ಲಿ ಲಿಖಿತ ನೋಟೀಸ ಕೊಟ್ಟಿದ್ದಾರೆ. ದಿ. 29-12-2022 ರಂದು ಪೋ. ಠಾಣೆಯಲ್ಲಿ ಕೊಟಸ್ಸಿದ್ದಾರೆ.

ಪೋ ಠಾಣೆಗೆ ಕೇಸಿನ ಸಂಬಂಧ ವಿಚಾರಿಸಲು ನಾನೇ ಹೋಗಿದ್ದೆನು, ಮಹಜರು ಕಾಲದಲ್ಲಿ ಇಬ್ಬರು ಪಂಚ ಸಾಕ್ಷಿಗಳು ಇದ್ದರು ಅವರನ್ನು ಪೋಲೀಸರೇ ಕರೆದುಕೊಂಡು ಬಂದಿದ್ದರು. ಪೊಲೀಸರು ಬರುವಾಗ ಮ 1.30 ಆಗಿತ್ತು. ಅಲ್ಲಿ 5-6 ಜನ ಸೇರಿದ್ದರು. ಮಹಜರನ್ನು ಓದಿ ನೋಡಿದ್ದೇನೆ. ಅಲ್ಲಿ ಸ್ವಲ್ಪ ಚಿತ್ತು ಆಗಿತ್ತು. ಅದಕ್ಕೆ ಪೊಲೀಸರು ನನ್ನಸಹಿ ಪಡೆದಿಲ್ಲ. ಮಹಜರು ಆದ ನಂತರ

ಪೊಲೀಸರು 3.30 ರ ವರೆಗೆ ಸ್ಥಳದಲ್ಲಿದ್ದರು. ನಾನು ಬಟ್ಟೆಯನ್ನು ಮನೆಯ ಆವರಣದ ಸಿಟೌಟ್ ನಲ್ಲಿ ಕೊಟ್ಟಿದ್ದೇನೆ. ನಾನು ಕೊಟ್ಟಾಗ ಸಾಧಾರಣ 3.00 ಗಂಟೆಯಾಗಿತ್ತು. ಆ ದಿನ ನಾನು ಅದೇ ಹೊತ್ತಿನಲ್ಲಿ ಸಹಿ ಮಾಡಿದ್ದೇನೆ.

ನ್ಯಾಯಾಧೀಶರ ಸಮ್ಮುಖ ಹೇಳಿಕೆ ನೀಡಲು ಪೊಲೀಸರೇ ನನಗೆ ತಿಳಿಸಿದ್ದರು. ಯಾವಾಗ ಹೋಗಬೇಕು ಎಂದು ಹೇಳಿದ್ದಾರೆ. ಬೇರೆ ಯಾವ ವಿಚಾರವನ್ನೂ ವಿಮರ್ಶೆ ಮಾಡಿಲ್ಲ. ನ್ಯಾಯಾಧೀಶರ ಸಮ್ಮುಖ ಹೇಳಿಕೆ ಕೊಟ್ಟಾಗ ನೈಟಿ ಹರಿದಿದ್ದ ವಿಚಾರವನ್ನು ತಿಳಿಸಿದ್ದೇನೆ. ಅದನ್ನು ಅವರು ದಾಖಲಿಸಿದ್ದಾರೆ. ಅದನ್ನು ಓದಿ ನೋಡಿದ್ದೇನೆ.

ದಿ.29-12-22 ರಂದು ಮರುಹೇಳಿಕೆಯನ್ನು ಸಂಜೆ 5 ರ ಸಮಯ ನೀಡಿದ್ದೇನೆ. ನಮ್ಮ ಜಾಗದ ನಕ್ಷೆಯನ್ನು ಪೊಲೀಸರಿಗೆ ಕೊಟ್ಟಿಲ್ಲ. ಮುಂಚಿನಿಂದಲೂ ನಮ್ಮ ಮನೆಯಲ್ಲಿ 6 ಸಿಸಿ ಟಿವಿ ಕ್ಯಾಮರ ಇದೆ. ಸಾಧಾರಣ 100 ಮೀಟರ್ ಗಳಷ್ಟು ದೂರ ಸ್ಪಷ್ಟವಾಗಿ ಕಾಣುವಂತಹ ಕ್ಯಾಮರಾಗಳಾಗಿರುತ್ತವೆ. ತೋಟದಲ್ಲಿ ಸಿಸಿ ಟಿವಿ ಕ್ಯಾಮರ ಅಳವಡಿಸಿದ್ದೇವೆ. ಅದು ಹಿಕ್ ವಿಜನ್ ಕಂಪನಿಯದ್ದಾಗಿದೆ. ಅದು ಮೊಬೈಲಿನಲ್ಲಿ ಸ್ಟೋರ್ ಆಗುತ್ತದೆ. ನನ್ನ ಹತ್ತಿರ ವಿವೊ ಮತ್ತು 1ಪ್ಲಸ್ ಕಂಪನಿಯ ಮೊಬೈಲ್ ಇದೆ. ಘಟನೆ ಸಂಬಂಧಿತ ದಾಖಲಾಗಿದ್ದ ಫೂಟೇಜನ್ನು ಆಸ್ಪತ್ರೆಯಿಂದ ಬಂದ ನಂತರ ನೋಡಿದ್ದೇನೆ. ಮಹಜರು ಕಾಲದಲ್ಲಿ ಪೊಲೀಸರು ಬಂದಾಗ ಇಂತಹ ಸ್ಥಳದಲ್ಲಿ ಸಿಸಿ ಟಿವಿ ಕ್ಯಾಮರ ಇದೆ ಅದರ ಫೂಟೇಜ್‌ಗಳನ್ನು ನೋಡಬಹುದು ಎಂದು ತಿಳಿಸಿಲ್ಲ. ಆ ರೀತಿ ತಿಳಿಸಲು ನನಗೆ ಆಕ್ಷೇಪ ಇರಲಿಲ್ಲ. ವಿಡಿಯೋ ಡೌನ್ಲೋಡ್ ಮಾಡಿ ಪೊಲೀಸರಿಗೆ ಕೊಟ್ಟ ನಿರ್ದಿಷ್ಟ ದಿನಾಂಕ ಹೇಳಲಾಗುವುದಿಲ್ಲ. ಬಹುಶಃ ಜನವರಿ ತಿಂಗಳಿನಲ್ಲಿ ಕೊಟ್ಟಿರಬಹುದು. ಅದನ್ನು ಸಿಡಿಗೆ ನಾನೇ ನನ್ನ ಲ್ಯಾಪ್ಟಾಪ ದಿಂದ ಡೌನ್ಲೋಡ್ ಮಾಡಿದ್ದೇನೆ. ನನ್ನ ಹತ್ತಿರ ಡೆಲ್ ಕಂಪನಿಯ ಲ್ಯಾಪ್ಟಾಪ್ ಇರುತ್ತದೆ. ನಾನು ಹೇಳಿದ ಮೊಬೈಲ್, ಲ್ಯಾಪ್ಟಾಪ ಹಾಗೂ ಸಿಡಿಗಳ ಸ್ಟೋರೇಜ್ ಕೆಪಾಸಿಟಿಯ ಬಗ್ಗೆ ಪೊಲೀಸರಿಗೆ ದಾಖಲೆ ಕೊಟ್ಟಿಲ್ಲ.

3 ನೇ ಆರೋಪಿ ಮೊದಲು ನನ್ನ ಹತ್ತಿರ ಕೆಲಸ ಮಾಡುತ್ತಿದ್ದರು. 3 ನೇ ಆರೋಪಿ ನನ್ನ ಹತ್ತಿರ ಕೆಲಸ ಮಾಡುವಾಗ ಮತ್ತು ಅದರ ನಂತರ ನಾನು ಆತನಿಗೆ ಅವಾಚ್ಯ ನಿಂದಿಸಿ ಜಾತಿನಿಂದನೆ ಮಾಡಿದ್ದೇನೆ ಎಂದು ದೂರು ದಾಖಲಿಸಿದ್ದು ಅದರ ಪ್ರಕಾರ ನನ್ನ ಮೇಲೆ ಕೇಸು ದಾಖಲಾಗಿತ್ತು ಎಂದರೆ ಸರಿ. 1 ನೇ ಆರೋಪಿಯ ತೋಟಕ್ಕೆ ಕೆಲಸಕ್ಕೆ ಬರುವುದನ್ನು ತಪ್ಪಿಸುವ ಉದ್ದೇಶದಿಂದ 2 ಮತ್ತು 3 ನೇ ಆರೋಪಿತರ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಜಾಗದ ಬಗ್ಗೆ ತಕರಾರು ಇರುವ ಕಾರಣ ಅರದಲ್ಲಿ ಯಶಸ್ಸು ಕಾಣಲು 1 ನೇ ಆರೋಪಿಯ ವಿರುದ್ಧ ದೂರು

ದಾಖಲಿಸಿದ್ದೇನೆ ಎಂದರೆ ಸುಳ್ಳು. ನಾನು ತೋಟದಲ್ಲಿ ಬಿದ್ದು ಗಾಯ ಮಾಡಿಕೊಂಡಿದ್ದು ಹಾಗೂ ಬಟ್ಟೆ ಹರಿದುಕೊಂಡಿದ್ದು ಹೊರತುಪಡಿಸಿ ನಾನು ಹೇಳಿದ ಪ್ರಕರಣ ನಡೆದೇ ಇಲ್ಲ ಎಂದರೆ ಸುಳ್ಳು.

ಸೊತ್ತು ಸ್ವಾಧೀನತಾ ಮಹಜರು ಹಾಗೂ ಸ್ಥಳ ಮಹಜರನ್ನು ಸ್ಥಳದಲ್ಲಿ ತಯಾರಿಸಿಯೇ ಇಲ್ಲ ಎಂದರೆ ಸರಿಯಲ್ಲ. ಸತ್ಯವನ್ನು ಮರೆಮಾಚಿ ಸುಳ್ಳು ಸಾಧನೆ ಮಾಡುವ ಸಲುವಾಗಿ ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮರುಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿರುವ ಸಿಡಿಯಲ್ಲಿ ಯಾವುದೇ ನೈಜಾಂಶ ಇಲ್ಲ ಆದರೂ ಕೂಡಾ ಅದನ್ನು ಈ ಪ್ರಕರಣದ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ಸುಳ್ಳು ದೂರು ನೀಡಿ ಪೊಲೀಸರ ಮೇಲೆ ಪ್ರಭಾವ ಬೀರಿ ಸುಳ್ಳು ಕೇಸನ್ನು ಆರೋಪಿತರ ವಿರುದ್ಧ ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.